# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕಾರವಾರ

**ಓ.ಎಸ್.ನಂ. 9/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವರಾಮ | ಪಿ ಡಬ್ಲ್ಯೂ 3 |
| ತಂದೆಯ ಹೆಸರು | : | ರಾಮಾ ನಾಯ್ಕ | |
| ವಯಸ್ಸು | : | 58 ವರ್ಷ | |
| ಉದ್ಯೋಗ | : | ಭೂ ದಾಖಲೆಗಳ ಸಹಾಯಕ ನಿರ್ದೇಶಕರು | |
| ವಾಸ್ತವ್ಯ | : | ಕಾರವಾರ | |

ಸತ್ಯ ಪ್ರತಿಜ್ಞೆಯ ಮೇರೆಗೆಃ 7-11-2020

**ಮುಖ್ಯ ವಿಚಾರಣೆಃ ಶ್ರೀ ಎಸ್ ಕೆ ಪಿ ವಕೀಲರಿಂದಃ**

ನಾನು ಡಿಸೆಂಬರ್ 2019 ರಿಂದ ಇಲ್ಲಿಯ ತನಕ ಕಾರವಾರದ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2005 ನೇ ಸಾಲಿನಲ್ಲಿ ತಹಶೀಲ್ದಾರ ಕಚೇರಿ ಮತ್ತು ಭೂ ದಾಖಲೆಗಳ ಇಲಾಖೆ ಕಚೇರಿ ಕಂದಾಯ ಇಲಾಖೆಗೆ ಸೇರ್ಪಡೆ ಆಗಿತ್ತು. 2016 ನೇ ಸಾಲಿನಲ್ಲಿ ತಹಶೀಲ್ದಾರ ಕಚೇರಿ, ಭೂ ದಾಖಲೆಗಳ ಇಲಾಖೆಗಳ ಕಚೇರಿ ಕಂದಾಯ ಇಲಾಖೆಯಿಂದ ಬೇರ್ಪಟ್ಟವು. ತದನಂತರ ಸರ್ವೆ ನಕಾಶೆಗಳನ್ನು ನಮ್ಮ ಕಚೇರಿಯಲ್ಲಿ ನಿರ್ಹಿಸುತ್ತೇವೆ. ಸರ್ವೆ ದಾಖಲಾತಿಗಳ ಪ್ರಕಾರ ಆರ್ ಟಿ ಸಿ ಗಳು ಇರುತ್ತವೆ. ಈಗ ನನಗೆ ನಿಪಿ-3 ರ ನಕಾಶೆಯನ್ನು ತೋರಿಸುತ್ತಿದ್ದು ಅದನ್ನು ನಮ್ಮ ಕಚೇರಿಯಿಂದ ನೀಡಲಾಗಿರುತ್ತದೆ. ನಿಪಿ-3 ರಲ್ಲಿ ಕಮ್ಮಿ ಜಾಸ್ತಿ ಪತ್ರಿಕೆಯಿಂದ ತಯಾರಾದ ನಕಾಶೆಯನ್ನು ನಮೂದು ಮಾಡಲಾಗಿದೆ. ನಿಪಿ-1 ರ ಪಹಣಿ ಪತ್ರಿಕೆಯಲ್ಲಿ ಅಳತೆಯನ್ನು 28 ಗುಂಟೆ ಎಂದು ನಮೂದು ಮಾಡಲಾಗಿದೆ. ನಿಪಿ-1 ರ ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ. 231 ಅ/1 ಅ 1 ಡ ರ ಅಳತೆಯು 15 ಗುಂಟೆ 4 ಆಣೆ ಎಂದು ನಮೂದು ಮಾಡಲಾಗಿದೆ. ಅದೇ ಪ್ರಕಾರ ನಿಪಿ-1 ರಲ್ಲಿ ಸರ್ವೆ ನಂ. 231 ಅ/1 ಅ 1 ಕ ರಲ್ಲಿ 15 ಗುಂಟೆ 1 ಆಣೆ ಎಂದು ನಮೂದು ಮಾಡಲಾಗಿದೆ. ಈಗ ನನಗೆ ದಿಃ 5-3-2015 ರ ಹಿಂಬರಹವನ್ನು ತೋರಿಸುತ್ತಿದ್ದು ಅದನ್ನು ನಮ್ಮ ಕಚೇರಿಯಿಂದ ಕೊಡಲಾಗಿರುತ್ತದೆ. ಸದರಿ ದಾಖಲೆಯನ್ನು ನಿಪಿ-10 ಎಂದು ಗುರುತಿಸಲಾಯಿತು. ಸದರಿ ಹಿಂಬರಹವನ್ನು ಈಗ ನನಗೆ ತೋರಿಸುತ್ತಿರುವ ದಿಃ 26-2-2015 ರ ಅರ್ಜಿ ಆಧಾರದ ಮೇಲೆ ಕೊಡಲಾಗಿದೆ. ಸದರಿ ಅರ್ಜಿಯನ್ನು ನಿಪಿ-11 ಎಂದು ಗುರುತಿಸಲಾಯಿತು. ಈಗ ನನಗೆ ದಿಃ 26-2-2015 ರ ಹಣ

ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರ ತೋರಿಸುತ್ತಿದ್ದು ಅದನ್ನು ನಮ್ಮ ಕಚೇರಿಯಿಂದ ನೀಡಲಾಗಿದೆ. ಸದರಿ ಹಣ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರವನ್ನು ನಿಪಿ-12 ಎಂದು ಗುರುತಿಸಲಾಯಿತು. ತಹಶೀಲ್ದಾರ ಕಚೇರಿಯಲ್ಲಿ ಭೂ ಪರಿವರ್ತನೆ ಆದ ಆದೇಶದ ಬಾಬ್ತು ನನಗೆ ಗೊತ್ತಿಲ್ಲ. ಈಗ ನನಗೆ ಸರ್ವೆ ನಂ. 231ರ ನಕಾಶೆಯನ್ನು ತೋರಿಸುತ್ತಿದ್ದು ಅದನ್ನು ನಮ್ಮ ಕಚೇರಿಯಿಂದ ನೀಡಲಾಗಿದೆ. ಸದರಿ ನಕಾಶೆಯನ್ನು ನಿಪಿ-13 ಎಂದು ಗುರುತಿಸಲಾಯಿತು. ನಿಪಿ-13ರ ನಕಾಶೆಯು ತಹಶೀಲ್ದಾರ ಕಚೇರಿಯ ಮೂಲ ದಾಖಲಾತಿಗಳ ಪ್ರಕಾರ ಆಗಿರುತ್ತದೆ. ಗಣಪತಿಯವರು ತಕರಾರು ಹಾಕುವಾಗ ನಾನು ನಮ್ಮ ಕಚೇರಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಸದರಿ ತಕರಾರು ಅರ್ಜಿ ಕಡತದಲ್ಲಿ ಇರುತ್ತದೆ. ಪಹಣಿ ಪತ್ರಿಕೆಯಲ್ಲಿರುವ ಅಳತೆಗೂ ನಮ್ಮ ಕಚೇರಿಯಲ್ಲಿರುವ ದಾಖಲಾತಿಗಳ ಅಳತೆಗೂ ವ್ಯತ್ಯಾಸವಿರುವುದಿಲ್ಲ. ನಾವು ಅಳತೆ ಮಾಡುವಾಗ ವಾದಿಯ ಜಮೀನನ್ನು ಪ್ರತಿವಾದಿಯ ಜಮೀನು ಎಂದು ತೋರಿಸಿರುವುದಿಲ್ಲ.

**ಪಾಟೀ ಸವಾಲುಃ 1 ರಿಂದ 4, 9, 11ಎ ಮತ್ತು ಬಿ ಹಾಗೂ 13ನೇ ಪ್ರತಿವಾದಿಗಳ ಪರವಾಗಿಃ ಶ್ರೀ ಎಸ್ ವಾಯ್ ಎಸ್ ವಕೀಲರಿಂದಃ**

ಈಗ ನನಗೆ ನಿಪಿ-13ರ ನಕಾಶೆಯನ್ನು ತೋರಿಸುತ್ತಿದ್ದು ಆ ನಕಾಶೆಯಲ್ಲಿ ದಕ್ಷಿಣ ದಿಕ್ಕಿನಲ್ಲಿ ತೋರಿಸಿದ ಸ್ಟ್ರಿಪ್ ದಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾರಿಯು ಸದರಿ ಸರ್ವೆ ನಂಬರಿನ ಪೂರ್ವ ದಿಕ್ಕಿಗೆ ಹೋಗಿದೆ ಎಂದರೆ ಸರಿಯಲ್ಲ. ನಿಪಿ-13ರ ನಕಾಶೆಯಲ್ಲಿ ದಾಟ್ ಗೆರೆಗಳಲ್ಲಿ ಉತ್ತರ ದಿಕ್ಕಿನಲ್ಲಿ ತೋರಿಸಿದ ಜಾಗವು ರಸ್ತೆ ಎಂದು ಹೇಳಲು ಬರುವುದಿಲ್ಲ. ನಿಪಿ-13ರ ನಕಾಶೆಯು ವಸ್ತು ಸ್ಥಿತಿಯಲ್ಲಿರುವ ಜಾಗೆಗೆ ಅನುಗುಣವಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-13ರ ನಕಾಶೆಯನ್ನು ಮೂಲ ಸರ್ವೆ ದಾಖಲಾತಿಗಳ ಪ್ರಕಾರ ತಯಾರಿಸಲಾಗಿದೆ. ಸದರಿ ಮೂಲ ದಾಖಲಾತಿಗಳನ್ನು ಸರ್ವೆ ಸೆಟ್ಟಲಮೆಂಟ ಆದ ಕಾಲಕ್ಕೆ ತಯಾರಿಸಲಾಗಿದೆ. ಸದರಿ ಸೆಟ್ಟಲಮೆಂಟ ದಾಖಲಾತಿಗಳನ್ನು 1836 ರಿಂದ ವಿವಿಧ ಹಂತಗಳಲ್ಲಿ ತಯಾರಿಸಲಾಗಿದೆ. ಸದರಿ ಸೆಟ್ಟಲಮೆಂಟ ಪ್ರಕ್ರಿಯೆ ಯಾವಾಗ ಮುಕ್ತಾಯವಾಯಿತೆಂದು ದಾಖಲಾತಿಗಳನ್ನು ನೋಡದೇ ಹೇಳಲು ಆಗುವುದಿಲ್ಲ. ಸರ್ವೆ ನಂ. 231ರಲ್ಲಿ ಹಲವಾರು ಪೋಡಿಗಳು ಆಗಿರುತ್ತವೆ ಎಂದರೆ ನಿಜ. ಸರ್ವೆ ನಂ. 231ರ ಜಮೀನಿಗೆ ನಾನು ಭೇಟಿ ನೀಡಿಲ್ಲ ಎಂದರೆ ನಿಜ. ನಾನು ಸಾಕ್ಷಿಯನ್ನು ದಾಖಲಾತಿಗಳ ಆಧಾರದ ಮೇಲೆ ನುಡಿಯುತ್ತಿದ್ದೇನೆ ಎಂದರೆ ನಿಜ. ಪೋಡಿಯಾದ ಜಮೀನಿನ ಬಗ್ಗೆ ನಮ್ಮ ಇಲಾಖೆ ದಾಖಲಾತಿಗಳಲ್ಲಿ ನಮೂದು ಮಾಡಲಾಗಿದೆ ಎಂದರೆ ನಿಜ.

**ಪಾಟೀ ಸವಾಲುಃ 5 ರಿಂದ 8, 10 ಮತ್ತು 11 ನೇ ಪ್ರತಿವಾದಿಗಳ ಪರವಾಗಿಃ**

ಸದರಿ ಪ್ರತಿವಾದಿಗಳ ವಿರುದ್ಧ ಕೇಸು ವಜಾ ಗೊಂಡಿರುತ್ತದೆ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ